# ಬೀದಿ ವ್ಯಾಪಾರಿಗಳ ಹಕ್ಕೊತ್ತಾಯ ಆಂದೋಲನ

## ಬೀದಿ ವ್ಯಾಪಾರ ಜನರ ಹಕ್ಕು

## - ರಾಷ್ಟ್ರೀಯ ಬೀದಿ ವ್ಯಾಪರಿಗಳ ನೀತಿ, 2009

# ಶಿವಾಜಿನಗರದ ಬೀದಿ ವ್ಯಾಪಾರದ ಒಂದು ಕಿರು ನೋಟ






ಬೀದಿ ವ್ಯಾಪಾರಿಗಳ ಹಕ್ಕೊತ್ತಾಯ ಆಂದೋಲನ

# ಶಿವಾಜಿನಗರದ ಬೀದಿ ವ್ಯಾಪಾರದ ಮುಖ್ಯ ಅಂಶಗಳು

- 40 ವರ್ಷಕ್ಕೂ ಮೇಲಿನ ಇತಿಹಾಸ
- 350 ವ್ಯಾಪಾರಿಗಳು ಮತ್ತು ಅವರ ಕುಟುಂಬಕ್ಕೆ ಸೇರಿದ 2000 ಸದಸ್ಯರು
- **ವ್ಯಾಪಾರದ ಸ್ಥಳಗಳು**

ಸೆಂಟ್ರಲ್ ಬೀದಿ, ಮೀನಾಕ್ಷಿ ಕೋಯಿಲ್ ಬೀದಿ

**ವ್ಯಾಪಾರದ ಪದಾರ್ಥಗಳು**

ಬಟ್ಟೆ, ಚಪ್ಪಲಿ, ಹಣ್ಣು, ಕರ್ಚಿಪ್, ಪೆನ್, ಬೆಲ್ಟ್, ಪ್ಲಾಸ್ಟಿಕ್ ಸಾಮಾನು, ಕ್ಲಿಪ್, ಹೇರ ಬ್ಯಾಂಡ್, ಲಗೇಜ್ ಬ್ಯಾಗ್, ಚುಡಿದಾರ್, ಮಕ್ಕಳ ಬಟ್ಟೆ, ಶರ್ಟ, ಪ್ಯಾಂಟ್, ಒಳ ಉಡುಪು, ಸ್ಕೂಲ ಶೂ ಇತ್ಯಾದಿ

# ಬೀದಿ ವ್ಯಾಪಾರದಿಂದ ಸಾರ್ವಜನಿಕರಿಗೆ ಆಗುವ ಅನುಕೂಲಗಳು

- ಕೆಳ ವರ್ಗಕ್ಕೆ ಹಾಗು ಮಧ್ಯಮ ವರ್ಗದ ಸಾವಿರಾರು ಜನರಿಗೆ ಕಡಿಮೆ ಬೆಲೆಗೆ (ಕಡಿಮೆ ಲಾಬಕ್ಕೆ) , ಅನುಕೂಲವಾಗಿ ವಸ್ತುಗಳು ದೊರೆಯುತಿತ್ತು
- ಬೀದಿ ವ್ಯಾಪರವೆ ಬಡ ಜನರ 'ಮಾಲ್'
- ಬೀದಿ ವ್ಯಾಪಾರಿಗಳು ಇರುವುದರಿಂದ ಆ ಪ್ರದೇಶದ ಜನರಿಗೆ ಹಾಗು ಪಾದಚಾರಿಗಳಿಗೆ ಭದ್ರತೆ
- ವ್ಯಾಪಾರಿಗಳಿಂದ ನಗರದ ಬೇರೆ ಹೋಲ್-ಸೇಲ್ ವ್ಯಾಪಾರಿಗಳಿಗೆ ವ್ಯಾಪರ
- ಆ ಪ್ರದೇಶಕ್ಕೆ ಒಂದು ಶೋಭೆ

# ಬೀದಿ ವ್ಯಾಪಾರದ ಬಗ್ಗೆ ಕಾನೂನು ಏನು ಹೇಳುತ್ತದೆ?

12ನೆಯ ಫೆಬ್ರುವರಿ, 2007ರಂದು ನೀಡಿದ ನಂತರದ ಆದೇಶದ ಪ್ರಕಾರ, ನಗರದ ರಸ್ತೆ ವ್ಯಾಪಾರಿಗಳ ರಾಷ್ಟ್ರೀಯ ಕಾರ್ಯನೀತಿಯನ್ನು ಅಳವಡಿಸಿಕೊಳ್ಳುವುದನ್ನು ಗುರುತಿಸಿದ ಪರಮೋಚ್ಚ ನ್ಯಾಯಾಲಯವು, ನಿಶ್ಚಿತವಾಗಿ (ಪ್ಯಾರಾ 33ರಲ್ಲಿ) ಹೀಗೆ ಹೇಳಿದೆ:

*"ನಿಗದಿತ ವೇಳೆಯ ಒಳಗೆ ತರ್ಕಬದ್ಧ ನಿರ್ಣಯಕ್ಕೆ ಬರಲು ಈ ವಿಷಯವನ್ನು ಶ್ರದ್ಧಾಪೂರ್ವಕವಾಗಿ ರಾಜ್ಯ ಸರ್ಕಾರವು ಅನುಸರಿಸುವುದೆಂದು ನಾವು ಆಶಿಸುತ್ತೇವೆ ಹಾಗೂ ನಂಬಿದ್ದೇವೆ.* ***ರಸ್ತೆವ್ಯಾಪಾರದ ಮೂಲಕ ಜೀವನವನ್ನು ಸಾಗಿಸಲು ನಗರದ ರಸ್ತೆ ವ್ಯಾಪಾರಿಗಳಿಗೆ ಒಂದು ರೀತಿಯ ಒತ್ತಾಸೆಯನ್ನು ನೀಡುವ ರಾಷ್ಟ್ರೀಯ ಕಾರ್ಯನೀತಿಯ ಗುರಿ ಹಾಗೂ ಉದ್ದೇಶಗಳಿಗೆ ಹೊಂದಿಕೊಳ್ಳುವಂತೆ ರಾಜ್ಯಾದ ನಿಯಮಗಳು ರೂಪಿತವಾಗಿರುತ್ತದೆ ಎಂದು ನಾವು ಸ್ಪಷ್ಟಪಡಿಸುತ್ತೇವೆ.***

# ರಾಷ್ಟ್ರೀಯ ಬೀದಿ ವ್ಯಾಪರಿಗಳ ನೀತಿ, 2009

- ಬೀದಿ ವ್ಯಾಪರ ಎಲ್ಲರ ಹಕ್ಕು
- ಕಾರ್ಯನೀತಿಯು ಜಾರಿಗೆ ಬರುತ್ತಿರುವಂತೆ, ಹಾಗೂ ಅದು ಘೋಷಣೆಗೊಂಡ ಒಂದು ವರ್ಷಕ್ಕೆ ಮೇಲ್ಪಡದ ಅವಧಿಯಲ್ಲಿ, ಪ್ರತಿಯೊಂದು ನಗರಪಾಲಿಕೆಯ ಅಧಿಕಾರವರ್ಗವು ಪಟ್ಟಣ ವ್ಯಾಪಾರ ಸಮಿತಿಯನ್ನು(ಟಿವಿಸಿ) ಸ್ಥಾಪಿಸಿ, ಸ್ಥಳೀಯ ಮಟ್ಟದಲ್ಲಿ ಬೀದಿ ವ್ಯಾಪಾರಿಗಳ ರಾಷ್ಟ್ರೀಯ ಕಾರ್ಯನೀತಿಯನ್ನು ಅನುಷ್ಠಾನಗೊಳಿಸುವ ಕ್ರಿಯಾಯೋಜನೆಯನ್ನು ತಯಾರಿಸುವುದನ್ನು ಪಟ್ಟಣ ವ್ಯಾಪಾರ ಸಮಿತಿಯು ಮಾಡತಕ್ಕದ್ದು.
- ಟಿವಿಸಿ ಸಹಭಾಗಿತ್ವದ ವಿಧಾನವನ್ನು ಅನುಸರಿಸುತ್ತದೆ ಹಾಗೂ ಬೀದಿ ವ್ಯಾಪಾರದ ಚಟುವಟಿಕೆಗಳ ಯೋಜನೆ, ಸಂಘಟನೆ ಹಾಗೂ ನಿಯಂತ್ರಣದ ಸಂಪೂರ್ಣ ಪ್ರಕ್ರಿಯೆಯನ್ನು ಮೇಲ್ವಿಚಾರಣೆ ಮಾಡುತ್ತದೆ
- ಪಟ್ಟಣ ವ್ಯಾಪಾರ ಸಮಿತಿಯಲ್ಲಿ ಬೀದಿ ವ್ಯಾಪಾರಿಗಳ ಸಂಘಗಳ ಪ್ರತಿನಿಧಿಗಳೂ ಇರಬೇಕು
- ಯಾವುದೇ ನಗರ/ಪಟ್ಟಣದಲ್ಲಿ ವ್ಯಾಪಾರ ಮಾಡುವ ಅನುಮತಿಯನ್ನು ನೀಡುವ ವ್ಯಾಪಾರಿಗಳ ಸಂಖ್ಯೆಯ ಮೇಲೆ, ಅಂತಹ ವ್ಯಾಪಾರಿಗಳು ನೋಂದಾವಣಿಯಾಗಿ ಹಾಗೂ ಟಿವಿಸಿಯ ಮೂಲಕ ನಿಯಂತ್ರಣಕ್ಕೆ ಒಳಪಟ್ಟಲ್ಲಿ, ಯಾವುದೇ ಅಂತಿಮ ದಿನಾಂಕ ಅಥವಾ ಸೀಮಿತತೆಗಳನ್ನು ವಿಧಿಸಬಾರದೆಂಬ ಪರಿಗಣಿತ ಅಭಿಪ್ರಾಯವನ್ನು ಈ ಕಾರ್ಯನೀತಿಯು ಅಳವಡಿಸಿಕೊಂಡಿದೆ.

**ಬೀದಿ ವ್ಯಾಪಾರಿಗಳ ಹಕ್ಕೊತ್ತಾಯ ಆಂದೋಲನ**

# ಇತ್ತೀಚೆಗೆ ಶಿವಾಜಿನಗರದಲ್ಲಿ ಆದದ್ದೇನು?

## ಜುಲೈ 7, 2010 ರಂದು, ಯಾವುದೇ ಮುನ್ಸೂಚನೆ ಇಲ್ಲದೆ..



## ವ್ಯಾಪಾರಿಗಳಿಗೆ ಅನುಕೂಲ ಮಾಡುವುದು ಸ್ಥಳೀಯ ಸರ್ಕಾರಗಳ ಜವಾಬ್ದಾರಿ. ಹೀಗಿರುವಾಗ ಪೋಲೀಸ ಇಲಾಖೆಯು ಏತ್ತಂಗಡಿ ಮಾಡಿದ್ದು ಸರಿಯೇ?

**ಬೀದಿ ವ್ಯಾಪಾರಿಗಳ ಹಕ್ಕೋತ್ತಾಯ ಆಂದೋಲನ**

# ಎತ್ತಂಗಡಿಯ ಪ್ರಭಾವ

- 7 ತಿಂಗಳಿಂದ ಯಾವುದೇ ಆದಾಯವಿಲ್ಲದೆ 350 ಕುಟುಂಬಗಳು ಸಂಕಷ್ಟದಲ್ಲಿದ್ದಾರೆ
- ಶಾಲಾ ಶುಲ್ಕವನ್ನು ಪಾವತಿಸದ ಕಾರಣ ಮಕ್ಕಳನ್ನು ಶಾಲೆಗಳಿಂದ ಹೊರಗಟ್ಟಿದ್ದಾರೆ
- ಬಾಡಿಗೆಗಳನ್ನು ಕಟ್ಟದ ಕಾರಣ ಮನೆಮಾಲಿಕರು ಮನನೋಯಿಸಿ ಮನೆ ಖಾಲಿ ಮಾಡಲು ಒತ್ತಾಯಿಸುತ್ತಿದ್ದಾರೆ
- ಸಾಲ ಮತ್ತು ಬಡ್ಡಿ ಮರುಪಾವತಿಸದ ಕಾರಣಕ್ಕೆ ಮಾನಸಿಕವಾಗಿ ಮತ್ತು ದಹಿಕವಾಗಿ ಲೇವಾದೇವಿಯವರು ಹಾಗು ಫೈನಾನಷಿಯರ್ಸ್ ಹಿಂಸಿಸುತ್ತಿದ್ದಾರೆ

# ಎತ್ತಂಗಡಿಯ ಪ್ರಭಾವ

- ವ್ಯಪಾರಿಗಳಿಲ್ಲದ ಕಾರಣ, ಪುಟ ಪಾತ್ ಶೌಚಾಲಯವಗಿ ಮಾರ್ಪಟಾಗಿದೆ, ಪಿಕ್ ಪಾಕೆಟಿಂಗ್ ಜಾಸ್ತಿ ಆಗಿದೆ, ಆ ಪ್ರದೇಶದಲ್ಲಿ ಭದ್ರತೆ ಕಡಿಮೆಯಾಗಿದೆ

- ಕಡಿಮೆ ಬೆಲೆಗೆ, ಕಡಿಮೆ ಸಮಯದಲ್ಲಿ ಪಡೆಯಬಹುದಾದ ಉತ್ತಮ ವಸ್ತುಗಳಿಗಾಗಿ ಬಡವರು ಹಾಗು ಮದ್ಯಮವರ್ಗದವರು ಪರದಾಡುವಂತಾಗಿದೆ

- ನಿರುದ್ಯೋಗದ ಸಮಸ್ಯೆ ಇರುವ ಈಗಿನ ಕಾಲದಲ್ಲಿ, ಸ್ವಯಂಪ್ರೇರಿತ ವ್ಯಾಪಾರಿಗಳನ್ನು ಬೀದಿಪಾಲು ಮಾಡಲಾಗಿದೆ. ಆದಾಯದಿಂದ ವಂಚಿತರಾದ ನಮ್ಮ ಕುಟುಂಬಗಳು ದಿನನಿತ್ಯದ ಆಹರಕ್ಕಾಗಿ ಪರದಾಡುವಂತಗಿದೆ. ಆಹಾರವಿಲ್ಲದೆ, ಕುಟುಂಬದವರು ಅನಾರೋಗ್ಯಕ್ಕೆ ತುತ್ತಾಗುತ್ತಿರುವ ಸಮಯದಲ್ಲಿ ಆಊಷದಿಗಳನ್ನು ಸಹ ಒದಗಿಸಲು ಸಾದ್ಯವಗುತ್ತಿಲ್ಲ.

# ನಮ್ಮ ಹಕ್ಕೊತ್ತಾಯಗಳು

1. ಈವರೆಗೆ ತೆರವುಗೊಳಿಸಿದ ಎಲ್ಲಾ ಬೀದಿ ವ್ಯಾಪಾರಿಗಳನ್ನು ನಮ್ಮ ಹಿಂದಿನ ಸ್ಥಳದಲ್ಲೇ ಪುನಃ ವ್ಯಾಪರ ಮಾಡಲು ಅನುವು ಮಾಡಿಕೊಡಬೇಕು. ವ್ಯಾಪಾರ ಮಾಡಲು ಸಹಾಯಾವಾಗುವಂತೆ ಪ್ರತಿಯೊಬ್ಬರಿಗೂ 1 ಥ 1 ಮೀಟರ್ ಅಳತೆಯ ಸ್ಥಳವನ್ನು ಪುಟ್ ಪಾತ್‌ನ ಕೊನೆಯಲ್ಲಿ ಕೊಡಬೇಕು

2. ಬಿ.ಬಿ.ಎಂ.ಪಿ.ಯು ನಮ್ಮ ಸಂವಿಧಾನ, ಸರ್ವೋಚ್ಚ ನ್ಯಾಯಾಲಯ, ನಗರದ ಬೀದಿ ವ್ಯಾಪಾರಿಗಳ ರಾಷ್ಟ್ರೀಯ ನೀತಿ 2009ಕ್ಕೆ ಅನುಗುಣವಾಗಿ ಅದರ ಬೀದಿ ವ್ಯಾಪಾರದ ಕುರಿತಾದ ಯೋಜನೆಗಳನ್ನು ರೂಪಿಸಬೇಕು

3. ಬಿ.ಬಿ.ಎಂ.ಪಿ.ಯು. ಕಾನೂನು ಪ್ರಕ್ರಿಯೆಯನ್ನು ಅನುಸರಿಸದೇ ಯಾವುದೇ ಎತ್ತಗಂಡಿಯನ್ನು ಮಾಡಬಾರದು. ವ್ಯಾಪಾರಿಗಳ ವಿರುದ್ಧದ ದೌರ್ಜನ್ಯವನ್ನು ಕೂಡಲೇ ನಿಲ್ಲಿಸಬೇಕು. ಸೌಂದರ್ಯೀಕರಣದ ಹೆಸರಿನಲ್ಲಿ, ಬಿ.ಬಿ.ಎಂ.ಪಿ.ಯು ಯಾವುದೇ ವ್ಯಾಪಾರಿಗಳನ್ನು ಬೆಂಗಳೂರಿನಲ್ಲಿ ಎಲ್ಲಿಯೂ ಖಾಲಿಮಾಡಬಾರದು.

**ಬೀದಿ ವ್ಯಾಪಾರಿಗಳ ಹಕ್ಕೊತ್ತಾಯ ಆಂದೋಲನ**

# ನಮ್ಮ ಹಕ್ಕೋತ್ತಾಯಗಳನ್ನು ಪಡೆಯಲು ಮಾಡಿರುವ ಪ್ರಯತ್ನಗಳು/ಬಿ.ಬಿ.ಎಂ.ಪಿ ಯ ಆಶ್ವಾಸನೆ

ಜುಲೈ ತಿಂಗಳಿಂದ ನಾವು ಸ್ಥಳೀಯ ಪೋಲಿಸ್ ಠಾಣೆಗೆ, ಸ್ಥಳೀಯ ಎ.ಸಿ.ಪಿ ಕಚೇರಿಗೆ, ಸ್ಥಳೀಯ ಬಿ.ಬಿ.ಎಂ.ಪಿ ಕಚೇರಿಗಳಿಗೆ ಅನೇಕ ಬಾರಿ ಹೋಗಿ, ಅಧಿಕಾರಿಗಳನ್ನು ಬೇಟಿಯಾದ ಮೇಲೂ ನಮಗೆ ನಮ್ಮ ಹಿಂದಿನ ಸ್ಥಳದಲ್ಲೇ ಪುನಃ ವ್ಯಾಪರ ಮಾಡಲು ಅನುಮತಿ ದೋರೆಯಲಿಲ್ಲ.

ಬೇರೆ ದಾರಿಯಿಲ್ಲದೆ ನಾವು ನಮ್ಮ ಹಕ್ಕುಗಳಿಗೆ ಒತ್ತಾಯಿಸಿ ಅಕ್ಟೋಬರ್ 21 ರಂದು ಬಿ.ಬಿ.ಎಂ.ಪಿಯ ಕಚೇರಿಯಲ್ಲಿ ಧರಣಿ ಕುಳಿತೆವು. ಆ ದಿವಸ ಮಾನ್ಯ ಮಹಾ ಪೌರರು ಹಾಗು ವಿರೋಧ ಪಕ್ಷದ ನಾಯಕರು ಬಂದು ನಮನ್ನು ಬೇಟಿಯಾದರು. ಮಹಾಪೌರರು ಬೀದಿ ವ್ಯಾಪರಿಗಳಿಗೆ ಬೆಂಬಲ ಕೊಡುವುದಾಗಿ ಹೇಳಿ, ನಮ್ಮ ಹಕ್ಕೊತಾಯಗಳನ್ನು ಪೂರೈಸಲು ಬಿ.ಬಿ.ಎಂ.ಪಿ ಆಯುಕ್ತರೊಡನೆ ಸಭೆಯೊಂದನ್ನು ಕರೆಯುವುದಾಗಿ ಆಶ್ವಾಸನೆ ನೀಡಿದರು.



ಬೀದಿ ವ್ಯಾಪಾರಿಗಳ ಹಕ್ಕೋತ್ತಾಯ ಆಂದೋಲನ

ಹಲವು ಬೇಟಿಯ ನಂತರವೂ, ಸಭೆಗೆ ತಾರೀಖು ನಿಗದಿಯಾಗದೆ ಪಕ್ಷದಲ್ಲಿ ಬೇರೆ ದಾರಿಯಿಲ್ಲದೆ, ನಾವು ನವೆಂಬರ್ 22 ರಂದು ಬಿ.ಬಿ.ಎಂ.ಪಿ ಕಚೇರಿಯಲ್ಲಿ ಅನಿರ್ಧಿಷ್ಟಾವದಿ ಧರಣಿ ಕುಳಿತೆವು. ಮಹಾಪೌರರು ಡಿಸೆಂಬರ್ 15 ಸಭೆ ಕರಿಯುವುದಾಗಿ ಮಾತು ಕೊಟ್ಟರು







**ಬೀದಿ ವ್ಯಾಪಾರಿಗಳ ಹಕ್ಕೊತ್ತಾಯ ಆಂದೋಲನ**

# ಮಹಾಪೌರರ ಹೇಳಿಕೆ




ಬೀದಿ ವ್ಯಾಪಾರಿಗಳ ಹಕ್ಕೊತ್ತಾಯ ಆಂದೋಲನ

# ಬಿ.ಬಿ.ಎಂ.ಪಿ ಯ ಕರ್ತವ್ಯ

- ಬೀದಿ ವ್ಯಾಪಾರಿಗಳ ರಾಷ್ಟ್ರಿಯ ನೀತಿಯನ್ನು ಜಾರಿಗೆ ತರಬೇಕು
- ಪಟ್ಟಣ ವ್ಯಾಪಾರ ಸಮಿತಿಯನ್ನು(ಟಿವಿಸಿ) ಸ್ಥಾಪಿಸಬೇಕು
- ಹಿಂದೆ ನಾವು ವ್ಯಪಾರ ಮಾಡುತಿದ್ದ ಕಡೆ, ಪುನಹ ವ್ಯಪಾರ ಮಾಡಲು ಅನುಕೂಲ ಮಾಡಬೇಕು. ನಾವು ತೆರಿಗೆ ಕಟ್ಟಲು ತಯಾರಾಗಿದ್ದೆವೆ.



**ನಮಗೆ ವ್ಯಾಪಾರ ಮಾಡಲು ಅವಕಾಶ ಮಾಡಿಕೋಡಿ, ನಮ್ಮ ಹೊಟ್ಟೆಯ ಮೇಲೆ ಹೊಡೆಯಬೇಡಿ!**

ಬೀದಿ ವ್ಯಾಪಾರಿಗಳ ಹಕ್ಕೋತ್ತಾಯ ಆಂದೋಲನ